**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

# ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–28)**

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 1)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 4ರ ಪ್ರತಿಯೋಜನೆ.-** ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 1)ರ (ಇಲ್ಲಿ ಇನ್ನೂ ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

**"4. ಸೇವೆಗಳು, ಹೆಸರಿಸಲಾದ ಅಧಿಕಾರಿಗಳು, ಸಕ್ಷಮ ಅಧಿಕಾರಿಗಳು, ಮೇಲ್ಮನವಿ ಪ್ರಾಧಿಕಾರ, ಗೊತ್ತುಪಡಿಸಿದ ಕಾಲಮಿತಿಗಳು, ಪರಿಹಾರ ವೆಚ್ಚದ ದರ ಮತ್ತು ದಂಡನಾತ್ಮಕ ವೆಚ್ಚದ ದರಗಳ ಅಧಿಸೂಚನೆ.-** ಸರ್ಕಾರವು, ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ಅಧಿನಿಯಮ, 2026ರ ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ, ಅಧಿಸೂಚನೆಯ ಮೂಲಕ, ಸಚಿವಾಲಯದ ಪ್ರತಿಯೊಂದು ಇಲಾಖೆಯ ಅಡಿಯಲ್ಲಿ ಬರುವ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರ ಅಥವಾ ಸ್ಥಳೀಯ ಪ್ರಾಧಿಕಾರ ನೀಡುವ ಹೊಸ ಸೇವೆಗಳನ್ನು ಮತ್ತು ಹೆಸರಿಸಲಾದ ಅಧಿಕಾರಿಗಳನ್ನು ಹಾಗೂ ಈ ಅಧಿನಿಯಮದಡಿಯಲ್ಲಿ ನೀಡಲಾಗುವ ಸೇವೆಗಳಿಗೆ ನಿರ್ದಿಷ್ಟಪಡಿಸಿ ಗೊತ್ತುಪಡಿಸಿದ ಕಾಲಮಿತಿಯನ್ನು ಒಳಗೊಂಡಂತೆ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ಇವುಗಳನ್ನು ಸೇರಿಸುವುದಕ್ಕಾಗಿ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು, 9ನೇ ಪ್ರಕರಣದಡಿ ಸಂದಾಯವಾಗಬೇಕಾದ ಪರಿಹಾರ ವೆಚ್ಚದ ದರ ಮತ್ತು ಗರಿಷ್ಠ ಮೊತ್ತ ಹಾಗೂ 13-ಬಿ ಪ್ರಕರಣದಡಿ ಪುನರಾವರ್ತಿತ ಅಪರಾಧಕ್ಕಾಗಿ ಹೆಚ್ಚಿಸಿದ ಯಾವುದೇ ದರವನ್ನೊಳಗೊಂಡಂತೆ ಸಂದಾಯವಾಗಬೇಕಾದ ದಂಡನಾತ್ಮಕ ವೆಚ್ಚದ ದರ ಮತ್ತು ಗರಿಷ್ಠ ಮೊತ್ತ ಹಾಗೂ ಹಾಗೆ ನಿರ್ದಿಷ್ಟಪಡಿಸಲಾದ ಪರಿಹಾರ ವೆಚ್ಚ ಮತ್ತು ದಂಡನಾತ್ಮಕ ವೆಚ್ಚದ ದರ ಹಾಗೂ

ಗರಿಷ್ಠ ಮೊತ್ತವನ್ನೊಳಗೊಂಡು, ಅಂತಹುದೇ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿನ ನಮೂದುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ಬದಲಾಯಿಸಬಹುದು.

**3. ಪ್ರಕರಣ 9ರ ಪ್ರತಿಯೋಜನೆ.-** ಮೂಲ ಅಧಿನಿಯಮದ 9ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"9. ಪರಿಹಾರ ವೆಚ್ಚವನ್ನು ಸಂದಾಯಿಸುವ ಹೊಣೆಗಾರಿಕೆ.-** ನಾಗರಿಕ ಸಂಬಂಧಿತ ಸೇವೆಗಳನ್ನು ಅಥವಾ ಪ್ರತಿಯೊಬ್ಬ ನಾಗರಿಕರ ಅಪೀಲುಗಳನ್ನು ಅದನ್ನು ಒದಗಿಸಲು ಸರ್ಕಾರದಿಂದ ಯಾವುದೇ ನಿಷೇಧ ಅಥವಾ ನಿರ್ಬಂಧವಿಲ್ಲದಿದ್ದರೆ, ನಿಗದಿಪಡಿಸಿದ ಸಮಯದೊಳಗೆ ತಲುಪಿಸಲು ಅಥವಾ ವಿಲೇವಾರಿ ಮಾಡಲು ವಿಫಲರಾದ ಪ್ರತಿಯೊಬ್ಬ ಮೇಲ್ಮನವಿ ಪ್ರಾಧಿಕಾರಿ ಅಥವಾ ಸಕ್ಷಮ ಅಧಿಕಾರಿ ಅಥವಾ ಹೆಸರಿಸಲಾದ ಅಧಿಕಾರಿ ಅಥವಾ ಅವರ ಅಧೀನದ ಸರ್ಕಾರಿ ನೌಕರರು, ಪ್ರತಿ ಅರ್ಜಿಗೆ ಒಟ್ಟಾರೆಯಾಗಿ ಗರಿಷ್ಠ ಐದು ನೂರು ರೂಪಾಯಿಗಳಿಗೆ ಒಳಪಟ್ಟು ಅಥವಾ ಕಾಲಕಾಲಕ್ಕೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಗರಿಷ್ಠ ಮೊತ್ತಕ್ಕೆ ಒಳಪಟ್ಟು, ವಿಳಂಬದ ಅವಧಿಗಾಗಿ ಪ್ರತಿ ದಿನಕ್ಕೆ ಇಪ್ಪತ್ತು ರೂಪಾಯಿಗಳ ದರದಲ್ಲಿ ಪರಿಹಾರ ವೆಚ್ಚವನ್ನು ಸಂದಾಯ ಮಾಡಲು ಹೊಣೆಗಾರರಾಗಿರತಕ್ಕದ್ದು."

**4. 13ಎ ಮತ್ತು 13ಬಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದಲ್ಲಿ, 13ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

"**13ಎ. ಪುನರೀಕ್ಷಣೆ ಮತ್ತು ಸರ್ಕಾರದ ಇತರ ಅಧಿಕಾರಗಳು.-** (1) 12ನೇ ಪ್ರಕರಣ ಅಥವಾ 13ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ಯಾವುದೇ ಸಮಯದಲ್ಲಿ, 12ನೇ ಪ್ರಕರಣದ ಅಥವಾ 13ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಕಾನೂನುಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತನ್ನನ್ನು ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ಆ ಪ್ರಕರಣವು ನಾಗರಿಕರಿಗೆ ಅಥವಾ ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ತೀವ್ರ ಅನ್ಯಾಯವನ್ನುಂಟು ಮಾಡುತ್ತದೆ ಎಂದು ಕಂಡುಬಂದಲ್ಲಿ, ಮೇಲ್ಮನವಿ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಅಥವಾ ತೀರ್ಮಾನಿಸಿರುವ ಅಂಥ ಯಾವುದೇ ವ್ಯವಹರಣೆಯನ್ನು ಯಾವುದೇ ಹಂತದಲ್ಲಿ ಅದು ಹಿಂತೆಗೆದುಕೊಳ್ಳಬಹುದು ಮತ್ತು ಅದರ ಮೇಲೆ ಸೂಕ್ತವೆಂದು ಅದು ಭಾವಿಸಿರುವಷ್ಟರ ಮಟ್ಟಿಗೆ ಅಂಥ ಆದೇಶವನ್ನು ನೀಡಬಹುದು ಅಥವಾ ಅದು ನೀಡಬಹುದಾದಂಥ ನಿರ್ದೇಶನಗಳಿಗೆ ಅನುಸಾರವಾಗಿ ವಿಲೇವಾರಿ ಮಾಡಲು ಆ ವ್ಯವಹರಣೆಯನ್ನು ಬಿಟ್ಟುಬಿಡಬಹುದು:

ಪರಂತು, ಅಂಥ ವ್ಯಕ್ತಿಗೆ ಯಾವುದೇ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಈ ಉಪ-ಪ್ರಕರಣದ ಅಡಿಯಲ್ಲಿ ಯಾರೇ ವ್ಯಕ್ತಿಗೆ ಭಾದಕವಾಗುವಂತಹ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ:

ಮತ್ತು ಪರಂತು, ಪರಿಷ್ಕರಣೆ ಮಾಡಲು ಕೋರಲಾದ ಆದೇಶದ ದಿನಾಂಕದಿಂದ ಮೂರು ತಿಂಗಳುಗಳು ಮುಗಿದ ತರುವಾಯ ಈ ಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಪರಿಷ್ಕರಣೆಯ ನಂತರ, ನಾಗರಿಕನಿಗೆ ನೀಡಬೇಕಾದ ಸೇವೆಯು ವಿಳಂಬವಾಗಿದೆ ಅಥವಾ ಅನ್ಯಥಾ ಕೊರತೆಯಿದೆ ಮತ್ತು ಈ ಕಾರಣದಿಂದಾಗಿ ನಾಗರಿಕನು ತಪ್ಪಾಗಿ ಪರಿಹಾರ

ವೆಚ್ಚವನ್ನು ನಿರಾಕರಿಸಿದ್ದಾನೆ ಎಂದು ಸಾಬೀತಾದರೆ, ನಾಗರಿಕನು ಪರಿಹಾರ ವೆಚ್ಚವನ್ನು ಪಡೆಯಲು ಅರ್ಹನಾಗಿರತಕ್ಕದ್ದು, ಅದನ್ನು ಈ ಅಧಿನಿಯಮಯ ಉಪಬಂಧಗಳನುಸಾರ ಸಂಬಂಧಪಟ್ಟ ಅಧಿಕಾರಿಯಿಂದ ವಸೂಲು ಮಾಡತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(4) ಸರ್ಕಾರವು, ನಾಗರಿಕ ಸಂಬಂಧಿತ ಸೇವೆಗಳನ್ನು ಒದಗಿಸುವಲ್ಲಿ ವಿಳಂಬ ಅಥವಾ ಕೊರತೆಯನ್ನು ತಪ್ಪಿಸುವ ಉದ್ದೇಶಕ್ಕಾಗಿ ಯಾವುದೇ ಸಾರ್ವಜನಿಕ ಪ್ರಾಧಿಕಾರಿ ಅಥವಾ ಸರ್ಕಾರಿ ನೌಕರನಿಗೆ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನವನ್ನು ಯಾರಿಗೆ ನೀಡಲಾಗಿದೆಯೋ ಆ ಪ್ರತಿಯೊಬ್ಬ ಸಾರ್ವಜನಿಕ ಪ್ರಾಧಿಕಾರಿ ಅಥವಾ ಸರ್ಕಾರಿ ನೌಕರನು ಅದನ್ನು ಪಾಲಿಸತಕ್ಕದ್ದು.

(5) ಸರ್ಕಾರವು ಯಾವುದೇ ಸಾರ್ವಜನಿಕ ಪ್ರಾಧಿಕಾರಕ್ಕೆ ಅಥವಾ ಸರ್ಕಾರಿ ನೌಕರನಿಗೆ ನಾಗರಿಕ ಸಂಬಂಧಿತ ಸೇವೆಗಳ ವಿತರಣೆಗೆ ಸಂಬಂಧಿಸಿದ ವ್ಯವಹಾರ ಪ್ರಕ್ರಿಯೆಗಳ ಸುಧಾರಣೆಗಾಗಿ ಮತ್ತು ಈ ಅಧಿನಿಯಮದ ಅನುಷ್ಠಾನಕ್ಕೆ ಸಂಬಂಧಿಸಿದ ನೀತಿ ಸುಧಾರಣೆಗಳಿಗಾಗಿ ಸಾಮಾನ್ಯ ನಿರ್ದೇಶನಗಳನ್ನು ನೀಡಬಹುದು.

(6) ಈ ಅಧಿನಿಯಮದ ಆಡಳಿತವನ್ನು ವಹಿಸಿಕೊಟ್ಟ ಆಡಳಿತ ಇಲಾಖೆಯು, ಈ ಅಧಿನಿಯಮದ ಅಡಿಯಲ್ಲಿ ಆದೇಶಿಸಲಾದ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಯಾವುದೇ ಸಾರ್ವಜನಿಕ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಯಾರೇ ಸರ್ಕಾರಿ ನೌಕರನ ಸೇವೆಗಳನ್ನು ಕೋರಬಹುದು ಮತ್ತು ಅಂಥ ಸರ್ಕಾರಿ ನೌಕರನನ್ನು, ಹಾಗೆ ಕೋರಲಾದ ಮೇಲೆ, ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಸರ್ಕಾರಿ ನೌಕರನಿಗೆ ಅನ್ವಯವಾಗುವ ಸೇವಾ ನಿಯಮಗಳಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಏನೇ ಒಳಗೊಂಡಿದ್ದರೂ, ಸದರಿ ಉದ್ದೇಶಕ್ಕಾಗಿ ಸದರಿ ಆಡಳಿತ ಇಲಾಖೆಯೊಂದಿಗೆ ಕಾರ್ಯನಿರ್ವಹಿಸಿರುವುದಾಗಿ ಭಾವಿಸತಕ್ಕದ್ದು.

**13-ಬಿ. ದುರುದ್ದೇಶಪೂರಿತ ಅಥವಾ ಕಿರುಕುಳಕಾರಿ ದೂರುಗಳು ಅಥವಾ ಕುಂದುಕೊರತೆಗಾಗಿ ವೆಚ್ಚ.-** (1) ಸಕ್ಷಮ ಅಧಿಕಾರಿಯು ಅಥವಾ ಮೇಲ್ಮನವಿ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತಪ್ಪಿತಸ್ಥ ದೂರು ಅಥವಾ ಕುಂದುಕೊರತೆಗಳ ಬಗ್ಗೆ ತನಿಖೆ ಮಾಡುವಾಗ ಅಥವಾ ಸರ್ಕಾರವು, ಮೇಲ್ಮನವಿ ಪ್ರಾಧಿಕಾರದ ಆದೇಶದ ಮೇಲೆ 13-ಎ ಪ್ರಕರಣದ ಅಡಿಯಲ್ಲಿ ಪರಿಷ್ಕರಣೆಯ ಅಧಿಕಾರವನ್ನು ಚಲಾಯಿಸುವಾಗ, ಅಂಥ ದೂರು ಅಥವಾ ಕುಂದುಕೊರತೆಯು ಸುಳ್ಳು ಅಥವಾ ಯಾವುದೇ ಸಮರ್ಪಕ ಆಧಾರವಿಲ್ಲದೆ ಅಥವಾ ಸರ್ಕಾರಿ ನೌಕರನಿಗೆ ಕೇಡನ್ನುಂಟು ಮಾಡುವ ಉದ್ದೇಶದಿಂದ ಅಥವಾ ಇನ್ನೊಬ್ಬ ನಾಗರಿಕನ ಮೇಲೆ ಒತ್ತಡ ಹೇರುವ ಅಥವಾ ಬೆದರಿಸುವ ಉದ್ದೇಶದಿಂದ ದುರುದ್ದೇಶಪೂರಿತವಾಗಿ ಅಥವಾ ಕಿರುಕುಳ ಕೊಡಲು ಮಾಡಲಾಗಿದೆ ಎಂಬ ತೀರ್ಮಾನವನ್ನು ದಾಖಲಿಸಿದಲ್ಲಿ, ತೀರ್ಮಾನವನ್ನು ದಾಖಲಿಸುವ ಪ್ರಾಧಿಕಾರವು, ಲಿಖಿತ ಆದೇಶದ ಮೂಲಕ ಮತ್ತು ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ದೂರು ಅಥವಾ ಕುಂದುಕೊರತೆಗಳನ್ನು ಆಪಾದಿಸಿದ ನಾಗರಿಕನ ಮೇಲೆ ಕಾಲಕಾಲಕ್ಕೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಮೊತ್ತವನ್ನು ಮೀರದ ವೆಚ್ಚವನ್ನು ವಿಧಿಸಬಹುದು:

ಪರಂತು, ಅಂಥ ವ್ಯಕ್ತಿಗೆ ಯಾವುದೇ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಈ ಉಪ-ಪ್ರಕರಣದ ಅಡಿಯಲ್ಲಿ ಯಾರೇ ವ್ಯಕ್ತಿಗೆ ಭಾದಕವಾಗುವಂತಹ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಡಿಯಲ್ಲಿ ದಾಖಲಾದ ತೀರ್ಮಾನದ ಮೇಲೆ, ನಾಗರಿಕನು ಈಗಾಗಲೇ ಮೊದಲ ಸಂದರ್ಭದಲ್ಲಿನ ಖರ್ಚಿನೊಂದಿಗೆ ಭೇಟಿ ನೀಡಿದ್ದರೆ ಮತ್ತು ತರುವಾಯ ಅದೇ ರೀತಿಯ ತೀರ್ಮಾನದ ಮೇಲೆ, ದುರುದ್ದೇಶಪೂರಿತವಾಗಿ ಅಥವಾ ಕಿರುಕುಳ ಕೊಡಲು ಹೆಚ್ಚಿನ ದೂರು ಅಥವಾ ಕುಂದುಕೊರತೆಗಳನ್ನು ಆಪಾದಿಸಿದ್ದರೆ, ಅಂಥ ತರುವಾಯದ ಸಂದರ್ಭಗಳಲ್ಲಿ ವಿಧಿಸಬಹುದಾದ ವೆಚ್ಚವು (1)ನೇ ಉಪ-ಪ್ರಕರಣದಡಿಯಲ್ಲಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಪುನರಾವರ್ತಿತ ಅಪರಾಧಗಳಿಗಾಗಿ ಅನುಸೂಚಿಯಲ್ಲಿ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಹೆಚ್ಚುವರಿ ಮೊತ್ತಕ್ಕೆ ವಿಸ್ತರಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ವೆಚ್ಚವನ್ನು ಸಂಬಂಧಪಟ್ಟ ನಾಗರಿಕನಿಂದ ಭೂ ಕಂದಾಯ ಹಿಂಬಾಕಿಯಂತೆ ವಸೂಲು ಮಾಡತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ವೆಚ್ಚವನ್ನು ವಿಧಿಸುವ ಆದೇಶವನ್ನು ಸಕ್ಷಮ ಅಧಿಕಾರಿ, ಮೇಲ್ಮನವಿ ಪ್ರಾಧಿಕಾರ ಅಥವಾ ಸರ್ಕಾರವು ಈ ಅಧಿನಿಯಮದಡಿಯಲ್ಲಿ ಮೇಲ್ಮನವಿಯ ಅಥವಾ ಪರಿಷ್ಕರಣೆಯ ಯಾವುದೇ ಹಂತದಲ್ಲಿ ಹೊರಡಿಸಬಹುದು ಮತ್ತು ಇದು ಪರಿಹಾರ ವೆಚ್ಚವನ್ನು ವಿಧಿಸುವ ಆದೇಶಕ್ಕೆ ಅನ್ವಯವಾಗುವ ಈ ಅಧಿನಿಯಮದಡಿಯಲ್ಲಿನ ಮೇಲ್ಮನವಿ ಮತ್ತು ಪರಿಷ್ಕರಣೆಯ ಅದೇ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು."

**5. ಪ್ರಕರಣ 18ರ ಪ್ರತಿಯೋಜನೆ.-** ಮೂಲ ಅಧಿನಿಯಮದ ಪ್ರಕರಣ 18ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**18. ಅಧಿಕಾರವ್ಯಾಪ್ತಿಯ ಪ್ರತಿಷೇಧ.-** ಈ ಅಧಿನಿಯಮ ಮೂಲಕ ಅಥವಾ ಅದರಡಿಯಲ್ಲಿ ಸಕ್ಷಮ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರ ಅಥವಾ ಸರ್ಕಾರಕ್ಕೆ ನಿರ್ಧರಿಸಲು ಅಧಿಕಾರವಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 1)ನ್ನು ಈ ಮುಂದಿನವುಗಳಿಗಾಗಿ,-

(ಎ) ಅಧಿಸೂಚನೆಯ ಮೂಲಕ ಹೊಸ ನಾಗರಿಕ ಸೇವೆಗಳನ್ನು ಸೇರಿಸಲು, ಯುಕ್ತ ಸಕ್ಷಮ ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನು ಗೊತ್ತುಪಡಿಸಲು ಹಾಗೂ ಕಾಲಮಿತಿಗಳನ್ನು ಮತ್ತು ವೆಚ್ಚ ಸಂರಚನೆಗಳನ್ನು ಮಾರ್ಪಡಿಸಲು ಅನುಸೂಚಿಯನ್ನು ಇಂದೀಕರಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡಲು;

(ಬಿ) ಸೇವೆ ಒದಗಿಸಲು ವಿಳಂಭ ಮಾಡಿದ್ದಕ್ಕಾಗಿ ಸಂದಾಯಮಾಡಬೇಕಾದ ಗರಿಷ್ಠ ಪರಿಹಾರ ವೆಚ್ಚದ ಮಿತಿಯನ್ನು ಪ್ರತಿ ಅರ್ಜಿಗೆ ಐದು ನೂರು ರೂಪಾಯಿಗಳಿಗೆ ವಿಧಿಸುವ ಮೂಲಕ ತಪ್ಪಿತಸ್ಥ ಸರ್ಕಾರಿ ನೌಕರರ ಆರ್ಥಿಕ ಹೊಣೆಗಾರಿಕೆಯನ್ನು ಕ್ರಮಬದ್ಧಗೊಳಿಸಲು;

(ಸಿ) ಸಂಪೂರ್ಣ ಅನ್ಯಾಯವನ್ನು ಸರಿಪಡಿಸಲು ಒಂದು ವ್ಯಾಪಕವಾದ ಕಾರ್ಯವಿಧಾನವನ್ನು ಖಚಿತಪಡಿಸಿಕೊಳ್ಳುವ ಮೂಲಕ, ಕೆಳಹಂತದ ಅಧಿಕಾರಿಗಳು ಹೊರಡಿಸಿದ ಆದೇಶಗಳ ಕಾನೂನುಬದ್ಧತೆ ಮತ್ತು ಔಚಿತ್ಯವನ್ನು ಪರಿಶೀಲಿಸಲು ಸ್ವಯಂಪ್ರೇರಿತವಾಗಿ ಅಥವಾ ಅರ್ಜಿಯ ಮೇರೆಗೆ ರಾಜ್ಯ ಸರ್ಕಾರಕ್ಕೆ ಪರಿಷ್ಕರಣಾ ಅಧಿಕಾರವನ್ನು ನಿಹಿತಗೊಳಿಸಲು;

(ಡಿ) ಕರ್ತವ್ಯಲೋಪ ಮಾಡುವ ಸರ್ಕಾರಿ ನೌಕರರಿಂದ ನೇರವಾಗಿ ವಸೂಲಿ ಮಾಡುವುದನ್ನು ಖಚಿತಪಡಿಸಿಕೊಂಡು, ಪರಿಹಾರ ವೆಚ್ಚಗಳನ್ನು ತಪ್ಪಾಗಿ ನಿರಾಕರಿಸಿದ ನಾಗರಿಕರಿಗೆ ಶಾಸನಬದ್ಧ ಪರಿಹಾರವನ್ನು ಒದಗಿಸಲು;

(ಇ) ಸುಳ್ಳು, ದುರುದ್ದೇಶಪೂರಿತ ಅಥವಾ ಕಿರುಕುಳ ಉಂಟುಮಾಡುವ ದೂರು ಸಲ್ಲಿಸುವುದನ್ನು ತಡೆಯುವುದಕ್ಕಾಗಿ, ತಪ್ಪಿತಸ್ಥ ದೂರುದಾರರ ಮೇಲೆ ಸೂಕ್ತ ದಂಡದ ವೆಚ್ಚಗಳನ್ನು ವಿಧಿಸಲು ಅಧಿಕಾರಿಗಳಿಗೆ ಅಧಿಕಾರ ನೀಡುವ ಮೂಲಕ ಭೂಕಂದಾಯದ ಹಿಂಬಾಕಿಯಂತೆ ವಸೂಲಿ ಮಾಡಲು; ಮತ್ತು

(ಎಫ್) ತ್ವರಿತ ಆಡಳಿತಾತ್ಮಕ ಇತ್ಯರ್ಥವನ್ನು ಖಚಿತಪಡಿಸಲು, ಸದರಿ ಅಧಿನಿಯಮದಡಿಯಲ್ಲಿ ಅಧಿಕೃತಗೊಳಿಸಲಾದ ಅಧಿಕಾರಿಗಳ ಶಾಸನಬದ್ಧ ಸಾಮರ್ಥ್ಯದೊಳಗೆ ಬರುವ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟವಾಗಿ ಪ್ರತಿಷೇಧಿಸಲು,

-ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಈ ಹಂತದಲ್ಲಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಡಿ. ಕೆ. ಶಿವಕುಮಾರ್**
ಮುಖ್ಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011**

**(2012ರ ಕರ್ನಾಟಕ ಅಧಿನಿಯಮ 1)ರ ಉದ್ಧೃತ ಭಾಗ.**

**XXX XXX XXX**

**4. ಸೇವೆಗಳು, ಹೆಸರಿಸಲಾದ ಅಧಿಕಾರಿಗಳು, ಸಕ್ಷಮ ಅಧಿಕಾರಿಗಳು, ಮೇಲ್ಮನವಿ ಪ್ರಾಧಿಕಾರ ಮತ್ತು ಗೊತ್ತುಪಡಿಸಿದ ಕಾಲಮಿತಿಗಳ ಅಧಿಸೂಚನೆ.-** ಸರ್ಕಾರವು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗೆ, ಅಧಿಸೂಚನೆಯ ಮೂಲಕ, ಸಚಿವಾಲಯದ ಪ್ರತಿಯೊಂದು ಇಲಾಖೆಯ ಅಡಿಯಲ್ಲಿ ಬರುವ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೀಡುವ ಹೊಸ ಸೇವೆಗಳನ್ನು ಮತ್ತು ಹೆಸರಿಸಲಾದ ಅಧಿಕಾರಿಗಳನ್ನು ಹಾಗೂ ಈ ಅಧಿನಿಯಮದ ಅಡಿಯಲ್ಲಿ ನೀಡಲಾಗುವ ಸೇವೆಗಳಿಗೆ ನಿರ್ದಿಷ್ಟಪಡಿಸಿ ಗೊತ್ತುಮಾಡಿದ ಕಾಲಮಿತಿಯನ್ನು ಒಳಗೊಂಡಂತೆ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ಇವುಗಳನ್ನು ಸೇರಿಸುವುದಕ್ಕಾಗಿ ಅನುಸೂಚಿಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಅಂತಹುದೇ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿನ ನಮೂದುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

**XXX XXX XXX**

**9. ಪರಿಹಾರ ವೆಚ್ಚವನ್ನು ಸಂದಾಯ ಮಾಡಲು ಹೊಣೆಗಾರಿಕೆ.-** ಗೊತ್ತುಪಡಿಸಿದ ಸಮಯದೊಳಗೆ, ನಾಗರಿಕ ಸಂಬಂಧಿ ಸೇವೆಗಳನ್ನು, ಅದನ್ನು ನೀಡಲು ಸರ್ಕಾರದಿಂದ ನಿಷೇಧ ಅಥವಾ ನಿರ್ಬಂಧ ಇಲ್ಲದಿದ್ದರೆ, ನಾಗರಿಕರಿಗೆ ನೀಡಲು ಅಥವಾ ನಾಗರಿಕನೊಬ್ಬನ ಅಪೀಲುಗಳನ್ನು ವಿಲೇವಾರಿ ಮಾಡಲು ವಿಫಲನಾಗಿರುವಂಥ ಪ್ರತಿಯೊಬ್ಬ ಅಪೀಲು ಪ್ರಾಧಿಕಾರಿ ಅಥವಾ ಸಕ್ಷಮ ಅಧಿಕಾರಿ ಅಥವಾ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿರುವ ಸಾರ್ವಜನಿಕ ನೌಕರನು, ವಿಳಂಬದ ಅವಧಿಗೆ ಒಟ್ಟಾರೆಯಾಗಿ ಅರ್ಜಿಯೊಂದಕ್ಕೆ ಗರಿಷ್ಠ ಐದು ನೂರು ರೂಪಾಯಿಗಳಿಗೆ ಒಳಪಟ್ಟು, ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಂತೆ, ಪರಿಹಾರ ವೆಚ್ಚವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

**XXX XXX XXX**

**13. ಬಾಧಿತ ನಾಗರಿಕರಿಂದ ಮೇಲ್ಮನವಿ.-** (1) ಯಾವೊಬ್ಬ ವ್ಯಕ್ತಿಯ ಅರ್ಜಿಯನ್ನು 5ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ತಿರಸ್ಕರಿಸಲಾಗಿದೆಯೋ ಅಥವಾ ಗೊತ್ತುಮಾಡಿದ ಕಾಲಮಿತಿಯೊಳಗೆ ಆತನಿಗೆ ಸೇವೆಯನ್ನು ಒದಗಿಸಿಲ್ಲವೋ ಆ ವ್ಯಕ್ತಿಯು, ಅರ್ಜಿಯನ್ನು ತಿರಸ್ಕರಿಸಿದ ದಿನಾಂಕದಿಂದ ಅಥವಾ ಗೊತ್ತುಮಾಡಿದ ಕಾಲಮಿತಿಯು ಮುಕ್ತಾಯಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಕ್ಷಮ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು:

ಪರಂತು, ಮೇಲ್ಮನವಿದಾರನು ಸಾಕಷ್ಟು ಕಾರಣಕ್ಕಾಗಿ ಸಕಾಲದಲ್ಲಿ ಮೇಲ್ಮನವಿಯನ್ನು ದಾಖಲು ಮಾಡುವುದರಿಂದ ಪ್ರತಿಬಂಧಿತನಾಗಿದ್ದಾನೆಂದು ಸಕ್ಷಮ ಅಧಿಕಾರಿಯು ಮನಗಂಡಲ್ಲಿ, ಆತನು ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಮೇಲ್ಮನವಿಯನ್ನು ಅಂಗೀಕರಿಸಬಹುದು.

(2) ಸಕ್ಷಮ ಅಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸೇವೆಯನ್ನು ಒದಗಿಸಲು ಹೆಸರಿಸಲಾದ ಅಧಿಕಾರಿಗೆ ಆದೇಶಿಸಬಹುದು ಅಥವಾ ಮೇಲ್ಮನವಿಯನ್ನು ತಿರಸ್ಕರಿಸಬಹುದು ಅಥವಾ 9ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪರಿಹಾರ ವೆಚ್ಚವನ್ನು ವಿಧಿಸಬಹುದು.

(3) ಸಕ್ಷಮ ಅಧಿಕಾರಿಯ ತೀರ್ಪಿನ ವಿರುದ್ಧ, ತೀರ್ಪನ್ನು ನೀಡಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನು ಸಾಕಷ್ಟು ಕಾರಣಕ್ಕಾಗಿ ಸಕಾಲದಲ್ಲಿ ಮೇಲ್ಮನವಿಯನ್ನು ದಾಖಲು ಮಾಡುವುದರಿಂದ ಪ್ರತಿಬಂಧಿತನಾಗಿದ್ದಾನೆಂದು, ಮೇಲ್ಮನವಿ ಪ್ರಾಧಿಕಾರವು ಮನಗಂಡಲ್ಲಿ, ಅದು ಅರವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಮೇಲ್ಮನವಿಯನ್ನು ಅಂಗೀಕರಿಸಬಹುದು.

(4) ಮೇಲ್ಮನವಿ ಪ್ರಾಧಿಕಾರವು, ಹೆಸರಿಸಲಾದ ಅಧಿಕಾರಿಗೆ ಆತನು ನಿರ್ಧರಿಸಬಹುದಾದ ಅಂಥ ಅವಧಿಯೊಳಗೆ ಸೇವೆಯನ್ನು ಒದಗಿಸಲು ಆದೇಶಿಸಬಹುದು ಅಥವಾ ಆತನು ಮೇಲ್ಮನವಿಯನ್ನು ತಿರಸ್ಕರಿಸಬಹುದು.

(5) ಹೆಸರಿಸಲಾದ ಅಧಿಕಾರಿಯು, 5ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಪಾಲಿಸದಿದ್ದಲ್ಲಿ, ತದನಂತರ ಪಾಲನೆ ಮಾಡದಿರುವುದರಿಂದ ಬಾಧಿತನಾದ ಅರ್ಜಿದಾರನು, ಸಕ್ಷಮ ಅಧಿಕಾರಿಗೆ ನೇರವಾಗಿ ಅರ್ಜಿಯನ್ನು ಸಲ್ಲಿಸಬಹುದು. ಈ ಅರ್ಜಿಯನ್ನು, ಇದು ಮೊದಲನೇ ಮೇಲ್ಮನವಿಯಾಗಿದ್ದರೆ ಹೇಗೋ ಹಾಗೆಯೇ ವಿಲೆ ಮಾಡತಕ್ಕದ್ದು.

(6) ಹೆಸರಿಸಲಾದ ಅಧಿಕಾರಿಯು, ಈ ಪ್ರಕರಣದ (2) ನೇ ಉಪಪ್ರಕರಣದ ಅಡಿಯಲ್ಲಿಯ ಸೇವೆಯನ್ನು ಒದಗಿಸುವ ಆದೇಶವನ್ನು ಪಾಲಿಸದಿದ್ದಲ್ಲಿ, ಆಗ ಪಾಲನೆ ಮಾಡದಿರುವುದರಿಂದ ಬಾಧಿತನಾದ ಅರ್ಜಿದಾರನು, ಮೇಲ್ಮನವಿ ಪ್ರಾಧಿಕಾರಕ್ಕೆ ನೇರವಾಗಿ ಅರ್ಜಿಯನ್ನು ಸಲ್ಲಿಸಬಹುದು. ಈ ಅರ್ಜಿಯನ್ನು ಮೇಲ್ಮನವಿಯ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

(7) ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರವು, ಈ ಪ್ರಕರಣದಡಿಯಲ್ಲಿ ಅಪೀಲನ್ನು ತೀರ್ಮಾನಿಸುವಾಗ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಎಂದರೆ:-

(ಎ) ದಸ್ತಾವೇಜುಗಳ ಹಾಜರುಪಡಿಸುವಿಕೆ ಮತ್ತು ಪರಿಶೀಲನೆಯನ್ನು ಅಗತ್ಯಪಡಿಸುವುದು;

(ಬಿ) ಹೆಸರಿಸಲಾದ ಅಧಿಕಾರಿಗೆ ಮತ್ತು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸಮನುಗಳನ್ನು ನೀಡುವುದು; ಮತ್ತು

(ಸಿ) ನಿಯಮಿಸಬಹುದಾದ ಅಂಥ ಯಾವುದೇ ಇತರ ವಿಷಯಗಳು,

- ಇವುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ ಸಂಖ್ಯೆ 5) ಅಡಿಯಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹವೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

**XXX XXX XXX**

**18. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.-** ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಸಕ್ಷಮ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರವು ನಿರ್ಧರಿಸುವುದಕ್ಕೆ ಅಧಿಕಾರವಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 22ನೇ ಆಗಸ್ಟ್ 2026

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**TENTH SESSION**

# THE KARNATAKA SAKAALA SERVICES (AMENDMENT) BILL, 2026
## (LA Bill No. 28 of 2026)

A Bill further to amend the Karnataka Sakaala Services Act, 2011.

Whereas, it is expedient further to amend the Karnataka Sakaala Services Act, 2011 (Karnataka Act 1 of 2012) for the purposes hereinafter appearing;

Be it enacted by the Karnataka State Legislature in the seventy-seventh year of the Republic of India as follows:-

**1. Short title and commencement.-** (1) This Act may be called the Karnataka Sakaala Services (Amendment) Act, 2026.

(2) It shall come into force at once.

**2 Substitution of section 4.-** In the Karnataka Sakaala Services Act, 2011 (Karnataka Act 1 of 2012) (herein after referred to as the Principal Act, for section 4, the following shall be substituted, namely:-

"**4. Notification of services, designated officers, competent officers, appellate authority, stipulated time limits, rate of compensatory cost and rate of punitive cost.-** The Government may within a period of three months from the date of commencement of the Karnataka Sakaala Services (Amendment) Act, 2026, by notification, amend the Schedule to add new services, designated officers of every public authority or Local Authority under each Secretariat Department, competent officer and appellate authority along with stipulated time limits within which the services are rendered under this Act, the rate and maximum amount of compensatory cost payable under section 9, and the rate and maximum amount of punitive cost, including any enhanced rate for a repeat offence, payable under section 13-B, and may by like notification amend or vary the entries in the Schedule, including the rate and maximum amount of compensatory cost and punitive cost so specified."

**3. Substitution of section 9.-** In the Principal Act, for section 9, the following shall be substituted, namely:-

"**9. Liability to pay compensatory cost.-** Every Appellate Authority or Competent Officer or designated officer or his subordinate public servant who fails to deliver or dispose the citizen related services or appeals of a citizen within the stipulated time shall be liable to pay compensatory cost at the rate of twenty rupees per day for the period of delay subject to a maximum of five hundred rupees per application, in aggregate, or at such rate and subject to such maximum amount as may, from time to time, be specified in the Schedule, if there is no ban or restriction from the Government to provide the same."

**4. Insertion of new sections 13A and 13B.-** In the Principal Act, after section 13, the following new sections shall be inserted, namely:-

"**13-A. Revision and other powers of Government.-** (1) Notwithstanding anything contained in section 12 or section 13, the Government may, at any time, of its own motion, for the purpose of satisfying itself as to the legality or propriety of any order passed by the Appellate Authority under section 12 or section 13, where the case discloses gross injustice to the citizen or to the public servant concerned, withdraw to itself any such proceeding pending before, or decided by, the Appellate Authority, at any stage, and pass such order thereon as it deems fit, or remit the proceeding for disposal in accordance with such directions as it may issue:

Provided that, no order under this sub-section prejudicial to any person shall be passed without giving such person a reasonable opportunity of being heard.

Provided further that, no proceeding shall be initiated under this section after the expiry of three months from the date of the order sought to be revised.

(2) Where, on revision under this section, it is established that the service to the citizen was delayed or was otherwise deficient, and that the citizen was, on this account, wrongly denied compensatory cost, the citizen shall become eligible to receive compensatory cost, which shall be recoverable from the officer concerned in accordance with the provisions of this Act.

(3) An order passed under this section shall be final and shall not be called in question in any court.

(4) The Government may issue general or specific directions to any public authority or public servant for the purpose of avoiding delay or deficiency in the provision of citizen related services, and every public authority or public servant to whom such direction is issued shall comply with the same.

(5) The Government may issue general directions to any public authority or public servant for the improvement of business processes relating to the delivery of citizen related services, and for policy reforms bearing on the implementation of this Act.

(6) The administrative department entrusted with the administration of this Act may, for the purpose of carrying out the functions mandated under this Act, requisition the services of any public servant serving in any public authority, and such public servant shall, upon being so requisitioned, be deemed to work with the said administrative department for the said purpose, notwithstanding anything to the contrary contained in any other law or in the service rules applicable to such public servant.

**13-B. Cost for malicious or vexatious complaint or grievance.-** (1) Where the Competent Officer or the Appellate Authority, while inquiring into a complaint of default or a grievance under this Act, or the Government, while exercising its powers of revision under section 13-A over an order of the Appellate Authority, records a finding that such complaint or grievance was made maliciously or vexatiously, knowing it to be false or without any reasonable basis, or with the intent to malign a public servant or to pressure or blackmail another citizen, the authority so recording the finding may, by order in writing and for reasons to be recorded, impose on the citizen making such complaint or grievance a cost not exceeding such amount as may, from time to time, be specified in the Schedule:

Provided that no order under this section shall be passed without giving the citizen concerned a reasonable opportunity of being heard.

(2) Where a citizen has, upon a finding recorded under sub-section (1), already been visited with a cost on an earlier occasion, and is subsequently found, upon a like finding, to have made a further complaint or grievance maliciously or vexatiously, the cost imposable on such subsequent occasion shall not be less than the amount specified in the Schedule under sub-section (1), and may extend to such higher amount as may, from time to time, be specified in the Schedule for repeated offences.

(3) A cost imposed under this section shall be recoverable from the citizen concerned as an arrear of land revenue.

(4) An order imposing a cost under this section may be passed by the Competent Officer, the Appellate Authority, or the Government at any level of appeal or revision under this Act and shall be subject to the same provisions of appeal and revision under this Act as would apply to an order imposing compensatory cost."

**5. Substitution of section 18.-** In the Principal Act, for section 18, the following shall be substituted, namely:-

**"18. Bar of Jurisdiction.-** No Civil court shall have jurisdiction in respect of any matter which the competent officer or appellate authority or Government, is empowered by or under this Act to determine."

## STATEMENT OF OBJECTS AND REASONS

It is considered necessary further to amend the Karnataka Sakaala Services Act, 2011 to,-

(a) empower the State Government to update the Schedule by notification to incorporate new citizen services, designate appropriate competent and appellate authorities, and modify time limits or cost structures;

(b) streamline the financial liability of defaulting public servants by capping the maximum compensatory cost payable for delayed service delivery at five hundred rupees per application;

(c) vest revisionary powers in the State Government, either suo motu or on application, to examine the legality and propriety of orders passed by lower authorities, thereby ensuring an overarching mechanism to rectify gross injustice;

(d) provide statutory remedy for citizens who are wrongly denied compensatory costs, ensuring recovery of the same directly from the defaulting public servant;

(e) curb the filing of false, malicious, or vexatious complaints by empowering authorities to impose appropriate penal costs on erring complainants, recoverable as arrears of land revenue; and

(f) bar the jurisdiction of Civil Courts explicitly in respect of matters falling within the statutory competence of the authorities empowered under the said Act, ensuring expeditious administrative finality.

Hence, the Bill.

## FINANCIAL MEMORANDUM

There is no financial implication involved in the proposed Legislative measure at this stage.

**D. K. SHIVAKUMAR**
CHIEF MINISTER

**M.K. VISHALAKSHI**
Secretary
Karnataka Legislative Assembly

**ANNEXURE**

**Extract from the Karnataka Sakaala Services Act, 2011**

**(Karnataka Act 1 of 2012)**

**xx xx xx**

**4. Notification of services, designated officers, competent officers, appellate authority and stipulated time limits.-** The Government shall within a period of three months from the date of commencement of this Act, by notification, amend the Schedule to add new services, designated officers of every public authority or Local Authority under each Secretariat Department, competent officer and appellate authority along with stipulated time limits within which the services are rendered under this Act and may by like notification amend or vary the entries in the Schedule.

**xx xx xx**

**9 Liability to pay compensatory cost.-** Every Appellate Authority or Competent Officer or designated officer or his subordinate public servant who fails to deliver or dispose the citizen related services or appeals of a citizen within the stipulated time shall be liable to pay compensatory cost at the rate of twenty rupees per day for the period of delay subject to a maximum of five hundred rupees per application, in aggregate, if there is no ban or restriction from the Government to provide the same.

**xx xx xx**

**13. Appeal by the aggrieved citizen.-** (1) Any person, whose application is rejected under sub-section (2) of section 5 or who is not provided the service within the stipulated time, may file an appeal to the competent officer within thirty days from the date of rejection of application or the expiry of the stipulated time limit:

Provided that, the competent officer may admit the appeal even after the expiry of the period of thirty days if he is satisfied that the appellant was prevented by sufficient cause from filing the appeal in time.

(2) The competent officer may order to the designated officer to provide the service within the specified period or may reject the appeal or may impose compensatory cost according to the provisions of section 9.

(3) An appeal against decision of competent officer shall lie to the appellate authority within sixty days from the date on which the decision was made:

Provided that, the appellate authority may admit the appeal even after the expiry of the period of sixty days if he is satisfied that the appellant was prevented by sufficient cause from filing the appeal in time.

(4) The appellate authority may order to the designated officer to provide the service within such period as he may specify or he may reject the appeal.

(5) If the designated officer does not comply with sub-section (1) of section 5, then the applicant aggrieved from such non- compliance may submit an application directly to the competent officer. This application shall be disposed of in the manner as if it is the first appeal.

(6) If the designated officer does not comply the order of providing the service under sub-section (2) of this section, then the applicant aggrieved from such non-compliance may submit an application directly to the appellate authority. This application shall be disposed of in the manner of appeal.

(7) The competent officer and the appellate authority shall while deciding an appeal under this section, have the same powers as are vested in civil court while trying a suit under the Code of Civil Procedure, 1908 (Central Act 5 of 1908) in respect of the following matters, namely:-

(a) requiring the production and inspection of documents;

(b) issuing summons for hearing to the designated officer and appellant; and

(c) any other matter which may be prescribed

**xx** **xx** **xx**

**18. Bar of jurisdiction.-** No Civil court shall have jurisdiction in respect of any matter which the competent officer or appellate authority is empowered by or under this Act to determine.

Govt. Press, Vikasa Soudha, Bengaluru, 22nd August, 2026, P7, W.D. , Copies 500